**KOF**
Since 1984

# ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ನಿಯಮಿತ.,

ಕೇಂದ್ರ ಕಛೇರಿ: ನಂ. 11, 4ನೇ ಮಹಡಿ, ಬ್ಲ್ಯೂ ಕ್ರಾಸ್ ಛೇಂಬರ್ಸ್, ಇನ್‌ಫ್ಯಾಂಟ್ರಿ ಅಡ್ಡ ರಸ್ತೆ, ಬೆಂಗಳೂರು-560 001
ಫೋನ್: 080-25550268, 25583061, ಇ-ಮೇಲ್: hrd@kof.co.in

ಕ್ರ.ಸಂ:ಕೆ ಓಎಫ್:ಮಾಸಅ:ನೇಪ್ರ/2020-21/2000 ದಿನಾಂಕ: 09.03.2021

## ನೇಮಕಾತಿ ಪ್ರಕಟಣೆ

ಮಹಾಮಂಡಳದ ಕೇಂದ್ರ ಕಛೇರಿ ಹಾಗೂ ಇದರ ಘಟಕಗಳಿಗೆ ಈ ಕೆಳಕಂಡ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ | ಒಟ್ಟು ಹುದ್ದೆಗಳು | ವಿದ್ಯಾರ್ಹತೆ ಮತ್ತು ಅನುಭವ |
|---|---|---|---|---|
| 1 | ಜನರಲ್ ಮ್ಯಾನೇಜರ್ | 104600-150600 | 1 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕೃಷಿ/ಕೃಷಿ ಮಾರುಕಟ್ಟೆ/ಎಣ್ಣೆ ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ<br>ಅಥವಾ<br>ಭಾರತೀಯ ವ್ಯವಸ್ಥಾಪನಾ ಸಂಸ್ಥೆಯಿಂದ ಅಥವಾ ಗುಜರಾತಿನ ಆನಂದನಲ್ಲಿರುವ ಗ್ರಾಮೀಣ ವ್ಯವಸ್ಥಾಪನಾ ಸಂಸ್ಥೆಯಿಂದ ಅರ್ಥಿಕ/ಮಾರಾಟ ವಿಷಯದಲ್ಲಿ ವ್ಯವಹಾರ ಆಡಳಿತದ ಸ್ನಾತಕೋತ್ತರ ಎಂ.ಬಿ.ಎ ಪದವಿ<br>ಅನುಭವ: ಹಿರಿಯ ಹುದ್ದೆಗಳಲ್ಲಿ ಕನಿಷ್ಠ 05 ವರ್ಷಗಳ ಅನುಭವ. ಈ ಅನುಭವದಲ್ಲಿ ಖಾದ್ಯ ತೈಲ ಕೈಗಾರಿಕೆಗೆ ಸಂಬಂಧಪಟ್ಟ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಪೂರ್ಣಾ ಅಧಿಕಾರವುಳ್ಳ ಹುದ್ದೆಯಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹಾಗೂ ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ. |
| 2 | ಅಸಿಸ್ಟೆಂಟ್ ಮ್ಯಾನೇಜರ್ | 43100-83900 | 2 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಕೃಷಿ ಪದವಿ<br>ಅನುಭವ: ಕನಿಷ್ಠ 3 ವರ್ಷಗಳ ಕೆಲಸದ ಅನುಭವ ಹಾಗೂ ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ. |
| 3 | ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ | 21400-42000 | 1 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪಡೆದ ಪದವಿ<br>ಅನುಭವ: ಕನಿಷ್ಠ 2 ವರ್ಷಗಳ ಕೆಲಸದ ಅನುಭವ ಹಾಗೂ ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ. |
| 4 | ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ (ಗುಣ ನಿಯಂತ್ರಣ) | 21400-42000 | 1 | ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ ಪದವಿ-ಕೆಮಿಸ್ಟ್ರಿಯನ್ನು ಅಧ್ಯಯನ ಮಾಡಿರಬೇಕು<br>**ಅನುಭವ:** ಕನಿಷ್ಠ 2 ವರ್ಷಗಳ ಕೆಲಸದ ಅನುಭವ ಹಾಗೂ ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ. |

**ವಯೋಮಿತಿ :**

**ಜನರಲ್ ಮ್ಯಾನೇಜರ್** : ಕನಿಷ್ಠ - 40 ವರ್ಷಗಳು, ಗರಿಷ್ಠ - 52 ವರ್ಷಗಳು,

**ಅಸಿಸ್ಟೆಂಟ್ ಮ್ಯಾನೇಜರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ :** ಕನಿಷ್ಠ - 18 ಗರಿಷ್ಠ - 40 ವರ್ಷಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ಇವರಿಗೆ-40 ವರ್ಷಗಳು, ಹಿಂದುಳಿದ ಜಾತಿ/ಸಮುದಾಯ -38 ವರ್ಷಗಳು, ಸಾಮಾನ್ಯ ವರ್ಗದವರಿಗೆ-35 ವರ್ಷಗಳು.

**ಆಯ್ಕೆ ವಿಧಾನ** : ಅಭ್ಯರ್ಥಿಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ, ಕೆಲಸದ ಅನುಭವ, ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಿ, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

**ಅರ್ಜಿ ಶುಲ್ಕ :** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ಇವರಿಗೆ ರೂ.500/- ಮತ್ತು ಸಾಮಾನ್ಯ ವರ್ಗದವರಗೆ ರೂ.1000/-
ಅರ್ಜಿ ಶುಲ್ಕವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಓ.ಜಿ.ಎಫ್. ಲಿ., ಬೆಂಗಳೂರು ಇವರ ಹೆಸರಿಗೆ ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನ ಡಿ.ಡಿ.ಯ ಮೂಲಕ ಸಲ್ಲಿಸುವುದು.

**ಸಾಮಾನ್ಯ ನಿಬಂಧನೆಗಳು:**

1. ಕನ್ನಡ ಭಾಷಾಜ್ಞಾನ ಹಾಗೂ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿರುತ್ತದೆ. ವಿದ್ಯಾರ್ಹತೆ, ಅನುಭವ, ವಯಸ್ಸು ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ಪ್ರತಿಗಳನ್ನು ಲಗತ್ತಿಸುವುದು.
2. ಮುಕ್ತ ವಿಶ್ವವಿದ್ಯಾನಿಲಯದಿಂದ (Distance Education, Correspondence Course) ಪಡೆದ ಪದವಿ, ಸ್ನಾತಕೋತ್ತರ ಪದವಿಗಳನ್ನು ಪರಿಗಣಿಸಲಾಗುವುದಿಲ್ಲ. ನಿಯಮಿತ ಪದವಿ (Regular Course) ಯಿಂದ ಪಡೆದ ಪದವಿಯನ್ನು ಪರಿಗಣಿಸಲಾಗುವುದು
3. ಕೆ.ಓ.ಎಫ್ ವೆಬ್‌ಸೈಟ್ www.kof.co.in ನಿಂದ ಅರ್ಜಿಯ ನಮೂನೆಯನ್ನು ಡೌನ್ ಲೋಡ್ ಮಾಡಿಕೊಳ್ಳುವುದು.
4. ಆಯ್ಕೆಯಾದ ಅಭ್ಯರ್ಥಿಗಳನ್ನು ಕರ್ನಾಟಕ ರಾಜ್ಯ ಅಥವಾ ರಾಜ್ಯದ ಹೊರಗು ನೇಮಕಾತಿ ಮತ್ತು ವರ್ಗಾವಣೆ ಮಾಡಲು ಅವಕಾಶವಿರುತ್ತದೆ.
5. ಸೇವೆಯಲ್ಲಿರತಕ್ಕ ಅಭ್ಯರ್ಥಿಗಳು ಸಂಬಂಧಪಟ್ಟ ಇಲಾಖೆಯ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
6. ಎಲ್ಲಾ ದಾಖಲಾತಿಗಳನ್ನು ಒಳಗೊಂಡ ಅರ್ಜಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಓ.ಜಿ.ಎಫ್. ಲಿ. ನಂ.11, 4ನೇ ಮಹಡಿ, ಬ್ಲ್ಯೂ ಕ್ರಾಸ್ ಛೇಂಬರ್ಸ್, ಇನ್‌ಫೆಂಟ್ರಿ ಅಡ್ಡರಸ್ತೆ, ಬೆಂಗಳೂರು - 01 ಈ ವಿಳಾಸಕ್ಕೆ ನೇಮಕಾತಿ ಪ್ರಕಟಿತ ದಿನಾಂಕದಿಂದ 30 ದಿನಗಳೊಳಗೆ ಅಂದರೆ ದಿನಾಂಕ 08.04.2021 ಸಂಜೆ 5.30 ಗಂಟೆಯೊಳಗೆ ತಲುಪುವಂತಿರಬೇಕು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
7. ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆ ಎಂಬುದನ್ನು ನಮೂದಿಸುವುದು.
8. ಅಪೂರ್ಣ/ಶುಲ್ಕವಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಅಭ್ಯರ್ಥಿಗಳ ಅರ್ಹತೆ/ಆಯ್ಕೆ ಬಗ್ಗೆ ನೇಮಕಾತಿ ಪ್ರಾಧಿಕಾರದ ನಿರ್ಣಯವೇ ಅಂತಿಮವಾದದ್ದು.

**ಸಹಿ/- ವ್ಯವಸ್ಥಾಪಕ ನಿರ್ದೇಶಕರು**
**ಕೆಓಎಫ್, ಬೆಂಗಳೂರು**